
ಬಹಳ ಹಿಂದೆ ಜೆರುಸಲೆಮಿನಲ್ಲಿ ಇಬ್ಬರು ಸಹೋದರರಿದ್ದರು. ಅಣ್ಣನದು ಬಹಳ ದೊಡ್ಡ ಸಂಸಾರ. ಮನೆ ತುಂಬ ಮಕ್ಕಳು. ತಮ್ಮನಿಗೆ ಮದುವೆಯೇ ಆಗಿರಲಿಲ್ಲ. ಹೀಗಾಗಿ ಅವನು ಒಂಟಿಯಾಗಿದ್ದ. ಆದರೆ ಇಬ್ಬರೂ ಒಟ್ಟಿಗೆ ದುಡಿಯುತ್ತಿದ್ದರು.
ಸುಗ್ಗಿಯ ಕಾಲ. ಗೋಧಿಯ ಬೆಳೆ ಬಂದಿತ್ತು. ಬೆಳೆದ ಗೋಧಿಯನ್ನು ಒಂದು ಕಡೆ ಜಮಾಯಿಸಿ ಎರಡು ಭಾಗ ಮಾಡಿಕೊಂಡರು.
ಅಂದು ರಾತ್ರಿ ಒಂಟಿಯಾಗಿದ್ದ ತಮ್ಮ, ನಿದ್ದೆ ಬಾರದೆ ಹೀಗೆ ಯೋಚಿಸುತ್ತಿದ್ದ.
ಆಹಾ! ನನ್ನ ಅಣ್ಣನದು ದೊಡ್ಡ ಸಂಸಾರ. ನನಗಿಂತಲೂ ಅವನಿಗೆ ಧಾನ್ಯದ ಅವಶ್ಯಕತೆ ಹೆಚ್ಚು. ಈಗಲೇ ಹೋಗಿ, ನನ್ನ ಭಾಗದಿಂದ ಸ್ವಲ್ಪ ಗೋಧಿಯನ್ನು ಅವನ ಚೀಲಕ್ಕೆ ಹಾಕಿಬಿಡುತ್ತೇನೆ.
ಸುಮಾರು ಒಂದು ಗಂಟೆಯ ನಂತರ ಅಣ್ಣನೂ ಸಹ ನಿದ್ದೆ ಬಾರದೆ ಎದ್ದು ಕುಳಿತ. ಅವನು ಹೀಗೆ ಯೋಚಿಸುತ್ತಿದ್ದ.
ಆಹಾ! ನನ್ನ ತಮ್ಮ ಒಬ್ಬನೇ ಇದ್ದಾನೆ. ನೆಲ ಉಳಲು ಕೂಡ ಅವನ ಸಹಾಯಕ್ಕೆ ಯಾರೂ ಇಲ್ಲ. ಅವನಿಗೆ ನಾನು ಸಹಾಯ ಮಾಡಬೇಕು. ಈಗಲೇ ಹೋಗಿ, ನನ್ನ ಭಾಗದಿಂದ ಸ್ವಲ್ಪ ಗೋಧಿಯನ್ನು ಅವನ ಚೀಲಕ್ಕೆ ಹಾಕಿಬಿಡುತ್ತೇನೆ.
ಪರಹಿತ ಚಿಂತನೆ
ಬೆಳಗಾಯಿತು. ಇಬ್ಬರೂ ತಮ್ಮ ಪಾಲಿನ ಭಾಗಗಳನ್ನು ನೋಡುತ್ತಾರೆ. ಏನೂ ವ್ಯತ್ಯಾಸವಿಲ್ಲ. ಅದು ಸರಿಸಮನಾಗಿದೆ. ಇಬ್ಬರಿಗೂ ಪರಸ್ಪರರ ದಾನ ಗುಣ ಅರ್ಥವಾಯಿತು. ಇಬ್ಬರೂ ಪ್ರೀತಿಯಿಂದ ಆಲಂಗಿಸಿಕೊಂಡರು.
“ನಿಃಸ್ವಾರ್ಥತೆಯೇ ಆನಂದದ ಮೂಲ”
ಚಿತ್ರ : ರಾಮಗೌತಮ